ಶ್ರೀ ಸಿ.ಟಿ.ರವಿ : 2012–13ನೇ ಸಾಲಿನಲ್ಲಿ ರಾಜ್ಯದ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರ 250.22 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಅದರಲ್ಲಿ ಆಡಳಿತಾತ್ಮಕವಾಗಿ ಅನುಮೋದಿತವಾಗಿರುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈವರೆಗೆ ₹ 377.47 ಲಕ್ಷಗಳ ಬಳಕೆ ಪ್ರಮಾಣದ ಪತ್ರಗಳು ಸ್ವೀಕಾರವಾಗಿರುತ್ತವೆ. ಕೋಟಿ ಅಲ್ಲ. ಲಕ್ಷಗಳದ್ದು.

ಅಧ್ಯಕ್ಷರು: ₹ 250.22ಕೋಟಿ ಬಿಡುಗಡೆ ಮಾಡಿದ್ದಾರೆ. Utilization ಆಗಿರುವುದು 377.47 ಲಕ್ಷ ರೂ.ಗಳು.

ಶ್ರೀ ಸಿ .ಟಿ.ರವಿ : ಬಳಕೆ ಪ್ರಮಾಣ ಪತ್ರ, ಉಳಿದದ್ದು ಖರ್ಚು ಆಗಿದೆ ಎಂದು ಭಾವಿಸಬೇಕಾ? ಅಥವಾ ಖರ್ಚು ಆಗಿದೆಯೇ ಎಂದು ಭಾವಿಸಬೇಕಾ?

ಶ್ರೀ ಟಿ.ಬಿ.ಜಯಚಂದ್ರ: ಖರ್ಚಾದ ಮೇಲೆ Utilization Certificate ಕೊಡುವುದು. ನನ್ನ ಹತ್ತಿರ ಎಲ್ಲಿ ಉತ್ತರ ಇದೆ. ಈಗ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : Utilization ಅಷ್ಟು ಬಂದಿದೆ.

ಶ್ರೀ ಟಿ.ಬಿ.ಜಯಚಂದ್ರ : ಅಧ್ಯಕ್ಷರೆ, ಈಗ ಉತ್ತರ ಕಳುಹಿಸುತ್ತಿದ್ದಾರೆ 377 ಲಕ್ಷಗಳೆಂದು ಈಗ ಕಳುಹಿಸಿದ್ದಾರೆ.

ಶ್ರೀ ಸಿ.ಟಿ.ರವಿ : ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಪವಾಡ ನಡೆಯುತ್ತಿದೆ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೆ, ಮಂತ್ರಿಗಳು ಬಂದ ಮೇಲೆ ಅವರೇ ಉತ್ತರವನ್ನು ಹೇಳಲಿ.

ಜಮೀನಿನ ಸರ್ವೇ ಕಾರ್ಯಗಳ ಕುಂಠಿತ

29 (589); ಶ್ರೀ ಮಂಜುನಾಥ್ ಹೆಚ್ ಪಿ(ಹುಣಸೂರು)

ಅ) ರಾಜ್ಯದ ಕಂದಾಯ ಇಲಾಖೆಯಲ್ಲಿ ವಿವಿಧ ಪ್ರಕರಣಗಳ ಅಡಿಯಲ್ಲಿ ಮೋಜಿಣಿಗಾಗಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು: (ತಾಲ್ಲೂಕಾವಾರು ವಿವರ ನೀಡುವುದು) :

ಆ) ರಾಜ್ಯದಲ್ಲಿ ಪೋಡಿ ಆಂದೋಲನ ಯಾವ ಹಂತದಲ್ಲಿದೆ:

ಇ) ಜಮೀನಿನ ಸರ್ವೇ ಕಾರ್ಯದಲ್ಲಿ ಹಿನ್ನಡೆ ಉಂಟಾಗಲು ಕಾರಣ ವೇನು;

ಈ) ಬಹುತೇಕ ತಾಲ್ಲೂಕುಗಳಲ್ಲಿ ಜಮೀನುಗಳ ವ್ಯಾಜ್ಯಗಳು ಬಗೆಹರಿಯದೇ ಇರಲು ಜಮೀನಿನ ಸರ್ವೆ ಹಾಗೂ ದುರಸ್ತಿ ಆಗದೇ ಇರುವುದು ಬಹುಮುಖ್ಯ ಕಾರಣವಾಗಿದ್ದು ಶೀಘ್ರಗತಿಯಲ್ಲಿ ಸರ್ವೆ ಕಾರ್ಯ ಹಾಗೂ ಸಾರ್ವತ್ರಿಕ ದುರಸ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು ಸರ್ಕಾರದ ನೀಲುವೇನು ಹಾಗೂ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಪ್ರತ್ಯೇಕ ಪಟ್ಟಿ ಲಗತ್ತಿಸಿದೆ

ಆ) ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ನಮೂನೆ–1 ರಿಂದ 5ರವರೆಗಿನ ನಮೂನೆಗಳನ್ನು ಭರ್ತಿ ಮಾಡುವ ಕಾರ್ಯ ಪ್ರಗತಿಯಲ್ಲಿ ರುವುದರಿಂದ ಸದ್ಯಕ್ಕೆ ಪೋಡಿ ಆಂದೋಲನ ಸ್ಥಗಿತ ಗೊಳಿಸಲಾಗಿರುತ್ತದೆ. ನಮೂನೆ 1 ರಿಂದ 5ನ್ನು ಭರ್ತಿ ಮಾಡುವ ಕೆಲಸ ಪೂರ್ಣಗೊಂಡ ನಂತರ ಪೊಡಿ ಆಂದೋಲನ ಪುನರ್ ಪ್ರಾರಂಭಿಸುವ ಕಾರ್ಯಕ್ರಮ ರೂಪಿಸಲಾಗುವುದು.

ಇ) ಜಮೀನು ಸರ್ವೆ ಕಾರ್ಯದಲ್ಲಿ ಹಿನ್ನಡೆ ಉಂಟಾಗಲು ಪ್ರಮುಖ ಕಾರಣಗಳೆಂದರೆ:

1. ಇಲಾಖೆಯಲ್ಲಿ ಭೂಮಾಪಕರ ಕೊರತೆಯಿಂದ
2. ಕಂದಾಯ ಇಲಾಖೆಯಿಂದ ಭರ್ತಿ ಮಾಡಬೇಕಾಗಿರುವ ನಮೂನೆಗಳು 1 ರಿಂದ 5 ಸಿದ್ದಪಡಿಸಿಲ್ಲದಿರುವುದು

3. ರಾಜ್ಯದ ಬಹುತೇಕ ಹೆಚ್ಚಿನ ಸಂಖ್ಯೆಗಳಲ್ಲಿ ಆರ್.ಟಿ.ಸಿ ಗಳಲ್ಲಿ ತಿದ್ದುಪಡಿಗಳಿರುವುದು.

ಈ) ರಾಜ್ಯದಾದ್ಯಂತ ಮರುಭೂಮಾಪನ ಕೈಗೊಳ್ಳುವ ಮುನ್ನ ಪ್ರಾಯೋಗಿಕವಾಗಿ ಬೆಳಗಾವಿ ಜಿಲ್ಲೆಯ 3 ತಾಲ್ಲೂಕುಗಳಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯ ಸರ್ಕಾರದ ಆದೇಶ ಸಂ. ಕಂಇ 191 ಭೂಧಾಸ 2008 ಬೆಂಗಳೂರು ದಿ:4–9–2008 ರ ಮೇರೆಗೆ ಮರುಭೂಮಾಪನ ಕಾರ್ಯ ಕೈಗೊಂಡು ಪ್ರಸ್ತುತ 30 ಗ್ರಾಮಗಳ ಸಂಪೂರ್ಣ ಅಳತೆ ಕೆಲಸ ಪೂರ್ಣಗೊಂಡಿದ್ದು, ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇನ್ನುಳಿದ ಗ್ರಾಮಗಳ ಅಳತೆ ಕೆಲಸ ಪ್ರಗತಿಯಲ್ಲಿದೆ.

ನಂತರದಲ್ಲಿ ರಾಷ್ಟ್ರೀಯ ಭೂದಾಖಲೆಗಳ ಆಧುನೀಕರಣ ಯೋಜನೆ (ಎನ್.ಎಲ್.ಆರ್.ಎಂ.ಪಿ) ಯಡಿಯಲ್ಲಿ ರಾಜ್ಯದ 26 ಜಿಲ್ಲೆಗಳ 51 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಮರುಭೂಮಾಪನ ಕಾರ್ಯ ಕೈಗೊಂಡಿದ್ದು ಸುಮಾರು 24 ಗ್ರಾಮಗಳ ಅಳತೆಯ ಕೆಲಸವು ಮುಕ್ತಾಯ ಹಂತದಲ್ಲಿರುತ್ತದೆ.

ಇವುಗಳ ಮರುಭೂಮಾಪನ ಯಶಸ್ವಿ ನಂತರ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ಗ್ರಾಮಗಳಲ್ಲಿ ಎನ್.ಎಲ್. ಆರ್.ಎಮ್.ಪಿ ಯೋಜನೆಯಡಿ ಮರುಭೂಮಾಪನ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗುತ್ತದೆ. 2014–15 ನೇ ಸಾಲಿನಲ್ಲಿ ಈ ಕಾರ್ಯವನ್ನು ಪ್ರಾರಂಭಿಸಿ ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ರಾಷ್ಟ್ರೀಯ ಭೂದಾಖಲೆಗಳ ಆಧುನೀಕರಣ ಯೋಜನೆ ಯಡಿಯಲ್ಲಿ ರಾಜ್ಯದ 05 ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಬೆಳಗಾಂ, ನಲ್ಲಿ ಮರು ಭೂಮಾಪನ ಕಾರ್ಯ ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆಗೆ ಕೇಂದ್ರ

ಸರ್ಕಾರದಿಂದ ಈಗಾಗಲೇ ಮಂಜೂರಾತಿ ದೊರಕಿರುತ್ತದೆ. ಹಾಗೂ ಅನುದಾನ ಸಹ ಬಿಡುಗಡೆಗೊಂಡಿರುತ್ತದೆ. ಎಲ್ಲಾ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಒಟ್ಟು 58 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಮರಭೂಮಾಪನ ಕಾರ್ಯ ಕೈಗೆತ್ತಿಕೊಳ್ಳಲು ಕ್ರಮ ಕೈಗೊಂಡಿದ್ದು, 27 ಗ್ರಾಮಗಳಲ್ಲಿ ಈಗಾಗಲೇ ಮರುಭೂಮಾಪನ ಕಾರ್ಯ ಪ್ರಾರಂಭ ಗೊಂಡು ಮುಕ್ತಾಯದ ಹಂತದಲ್ಲಿರುತ್ತದೆ.

ರಾಷ್ಟ್ರೀಯ ಭೂದಾಖಲೆಗಳ ಆಧುನೀಕರಣ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಉಳಿದ 25 ಜಿಲ್ಲೆಗಳಲ್ಲಿ ಮರುಭೂಮಾಪನ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆಯ ಪ್ರಸ್ತಾವನೆಯನ್ನು ಈಗಾಗಲೇ ತಯಾರಿಸಲಾಗಿದ್ದು ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸುವ ಹಂತದಲ್ಲಿರುತ್ತದೆ.

MOJINI PENDENCY REPORT					
Sl. No	**Name of the district**	**Name of the taluk**	**11e**	**Tatkal podi**	**Total**
1	ಉಡುಪಿ	ಉಡುಪಿ	2283	78	2361
2	ಉಡುಪಿ	ಕಾರ್ಕಳ	1270	3	1273
3	ಉಡುಪಿ	ಕುಂದಾಪುರ	2779	103	2882
4	ಉಡುಪಿ	ಬ್ರಹ್ಮಾವರ	1802	81	1883
5	ಉಡುಪಿ	ಬೈಂದೂರು	1374	11	1385
6	ಉತ್ತರಕನ್ನಡ	ಅಂಕೋಲ	202	21	223
7	ಉತ್ತರಕನ್ನಡ	ಕಾರವಾರ	239	66	305
8	ಉತ್ತರಕನ್ನಡ	ಕುಮಟಾ	292	56	348

9	ಉತ್ತರಕನ್ನಡ	ಜೋಯಿಡ	40	4	44
10	ಉತ್ತರಕನ್ನಡ	ಭಟ್ಕಳ	389	30	419
11	ಉತ್ತರಕನ್ನಡ	ಮುಂಡಗೋಡ	80	22	102
12	ಉತ್ತರಕನ್ನಡ	ಯಲ್ಲಾಪುರ	77	15	92
13	ಉತ್ತರಕನ್ನಡ	ಸಿದ್ದಾಪುರ	208	61	269
14	ಉತ್ತರಕನ್ನಡ	ಸಿರ್ಸಿ	223	25	248
15	ಉತ್ತರಕನ್ನಡ	ಹಳಿಯಾಳ	139	12	151
16	ಉತ್ತರಕನ್ನಡ	ಹೊನ್ನಾವರ	428	12	440
17	ಕೊಡಗು	ಮಡಿಕೇರಿ	216	5	221
18	ಕೊಡಗು	ವಿರಾಜಪೇಟೆ	517	38	555
19	ಕೊಡಗು	ಸೋಮವಾರಪೇಟೆ	251	80	331
20	ಕೊಪ್ಪಳ	ಕರಟಗಿ	402	19	421
21	ಕೊಪ್ಪಳ	ಕುಷ್ಟಗಿ	1088	97	1185
22	ಕೊಪ್ಪಳ	ಕೊಪ್ಪಳ	878	96	974
23	ಕೊಪ್ಪಳ	ಗಂಗಾವತಿ	1250	71	1321
24	ಕೊಪ್ಪಳ	ಯಲ್ಬುರ್ಗ	1583	68	1651
25	ಕೋಲಾರ	ಕೆ.ಜಿ.ಎಫ್	128	3	131
26	ಕೋಲಾರ	ಕೋಲಾರ	1194	146	1340

27	ಕೋಲಾರ	ಬಂಗಾರಪೇಟೆ	701	54	755
28	ಕೋಲಾರ	ಮಾಲೂರು	799	45	844
29	ಕೋಲಾರ	ಮುಳಬಾಗಿಲು	481	22	503
30	ಕೋಲಾರ	ಶ್ರೀನಿವಾಸಪುರ	370	15	385
31	ಗದಗ	ಗಜೇಂದ್ರಗಡ	75	14	89
32	ಗದಗ	ಗದಗ	210	42	252
33	ಗದಗ	ನರಗುಂದ	167	9	176
34	ಗದಗ	ಮುಂಡರಗಿ	178	33	211
35	ಗದಗ	ರೋಣ	140	55	195
36	ಗದಗ	ಲಕ್ಷೇಶ್ವರ	87	34	121
37	ಗದಗ	ಶಿರಹಟ್ಟಿ	100	28	128
38	ಗುಲ್ಬರ್ಗ	ಅಫ್ಜಲ್‌ಪುರ	227	51	278
39	ಗುಲ್ಬರ್ಗ	ಆಳಂದ	2069	69	2138
40	ಗುಲ್ಬರ್ಗ	ಕಾಳಗಿ	657	34	691
41	ಗುಲ್ಬರ್ಗ	ಗುಲ್ಬರ್ಗ	1367	99	1466
42	ಗುಲ್ಬರ್ಗ	ಗುಲ್ಬರ್ಗ ಉತ್ತರ	446	14	460
43	ಗುಲ್ಬರ್ಗ	ಚಿಂಚೋಳಿ	944	24	968
44	ಗುಲ್ಬರ್ಗ	ಚಿತ್ತಾಪುರ	695	17	712

45	ಗುಲ್ಬರ್ಗ	ಜೇವರ್ಗಿ	1514	23	1537
46	ಗುಲ್ಬರ್ಗ	ಯಡ್ರಾಮಿ	1040	22	1062
47	ಗುಲ್ಬರ್ಗ	ಸೇಡಂ	450	25	475
48	ಚಾಮರಾಜನಗರ	ಕೊಳ್ಳೆಗಾಲ	341	9	350
49	ಚಾಮರಾಜನಗರ	ಗುಂಡ್ಲುಪೇಟೆ	779	74	853
50	ಚಾಮರಾಜನಗರ	ಚಾಮರಾಜನಗರ	1586	55	1641
51	ಚಾಮರಾಜನಗರ	ಯಳಂದೂರು	49	25	74
52	ಚಾಮರಾಜನಗರ	ಹನೂರು	958	24	982
53	ಚಿಕ್ಕಬಳ್ಳಾಪುರ	ಗುಡಿಬಂಡೆ	119	21	140
54	ಚಿಕ್ಕಬಳ್ಳಾಪುರ	ಗೌರಿಬಿದನೂರು	325	44	369
55	ಚಿಕ್ಕಬಳ್ಳಾಪುರ	ಚಿಂತಾಮಣಿ	589	46	635
56	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	664	87	751
57	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	418	16	434
58	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	523	44	567
59	ಚಿಕ್ಕಮಂಗಳೂರು	ಕಡೂರು	1291	109	1400
60	ಚಿಕ್ಕಮಂಗಳೂರು	ಕೊಪ್ಪ	133	30	163
61	ಚಿಕ್ಕಮಂಗಳೂರು	ಚಿಕ್ಕಮಂಗಳೂರು	942	131	1073
62	ಚಿಕ್ಕಮಂಗಳೂರು	ತರೀಕೆರೆ	793	67	860

63	ಚಿಕ್ಕಮಂಗಳೂರು	ನರಸಿಂಹರಾಜಪುರ	83	12	95
64	ಚಿಕ್ಕಮಂಗಳೂರು	ಮೂಡಿಗೆರೆ	325	54	379
65	ಚಿಕ್ಕಮಂಗಳೂರು	ಶೃಂಗೇರಿ	32	2	34
66	ಚಿತ್ರದುರ್ಗ	ಚಳ್ಳಕೆರೆ	565	59	624
67	ಚಿತ್ರದುರ್ಗ	ಚಿತ್ರದುರ್ಗ	1124	103	1227
68	ಚಿತ್ರದುರ್ಗ	ಮೊಳಕಾಲ್ಮೂರು	296	11	307
69	ಚಿತ್ರದುರ್ಗ	ಹಿರಿಯೂರು	591	87	678
70	ಚಿತ್ರದುರ್ಗ	ಹೊಸದುರ್ಗ	450	52	502
71	ಚಿತ್ರದುರ್ಗ	ಹೊಳಲ್ಕೆರೆ	440	32	472
72	ತುಮಕೂರು	ಕುಣಿಗಲ್	685	68	753
73	ತುಮಕೂರು	ಕೊರಟಗೆರೆ	611	42	653
74	ತುಮಕೂರು	ಗುಬ್ಬಿ	1281	63	1344
75	ತುಮಕೂರು	ಚಿಕ್ಕನಾಯಕನಹಳ್ಳಿ	519	15	534
76	ತುಮಕೂರು	ತಿಪಟೂರು	631	21	652
77	ತುಮಕೂರು	ತುಮಕೂರು	1744	215	1959
78	ತುಮಕೂರು	ತುರವೇಕೆರೆ	605	21	626
79	ತುಮಕೂರು	ಪಾವಗಡ	650	13	663
80	ತುಮಕೂರು	ಮಧುಗಿರಿ	424	42	466

81	ತುಮಕೂರು	ಸಿರಾ	692	71	763
82	ದಕ್ಷಿಣ ಕನ್ನಡ	ಕಡಬ	476	3	479
83	ದಕ್ಷಿಣ ಕನ್ನಡ	ಪುತ್ತೂರು	569	24	593
84	ದಕ್ಷಿಣ ಕನ್ನಡ	ಬಂಟ್ವಾಳ	3663	13	3676
85	ದಕ್ಷಿಣ ಕನ್ನಡ	ಬೆಳ್ತಂಗಡಿ	816	37	853
86	ದಕ್ಷಿಣ ಕನ್ನಡ	ಮಂಗಳೂರು	1665	52	1717
87	ದಕ್ಷಿಣ ಕನ್ನಡ	ಮೂಡಬಿದರೆ	760	43	803
88	ದಕ್ಷಿಣ ಕನ್ನಡ	ಸುಳ್ಯ	754	26	780
89	ದಾವಣಗೆರೆ	ಚನ್ನಗಿರಿ	902	86	988
90	ದಾವಣಗೆರೆ	ಜಗಳೂರು	668	52	720
91	ದಾವಣಗೆರೆ	ದಾವಣಗೆರೆ	1304	141	1445
92	ದಾವಣಗೆರೆ	ಹರಪನಹಳ್ಳಿ	838	75	913
93	ದಾವಣಗೆರೆ	ಹರಿಹರ	631	49	680
94	ದಾವಣಗೆರೆ	ಹೊನ್ನಾಳಿ	1024	120	1144
95	ಧಾರವಾಡ	ಕಲಘಟಗಿ	84	23	107
96	ಧಾರವಾಡ	ಕುಂದಗೋಳ	184	58	242
97	ಧಾರವಾಡ	ಧಾರವಾಡ	249	26	275
98	ಧಾರವಾಡ	ನವಲಗುಂದ	152	35	187

99	ಧಾರವಾಡ	ಹುಬ್ಬಳ್ಳಿ	146	35	181
100	ಬಳ್ಳಾರಿ	ಕುರುಗೋಡು	458	58	516
101	ಬಳ್ಳಾರಿ	ಕೂಡ್ಲಿಗಿ	339	50	389
102	ಬಳ್ಳಾರಿ	ಬಳ್ಳಾರಿ	972	62	1034
103	ಬಳ್ಳಾರಿ	ಸಂಡೂರು	187	32	219
104	ಬಳ್ಳಾರಿ	ಸಿರಗುಪ್ಪ	829	53	882
105	ಬಳ್ಳಾರಿ	ಹಗರಿಬೊಮ್ಮನಹಳ್ಳಿ	459	33	492
106	ಬಳ್ಳಾರಿ	ಹಡಗಲಿ	484	57	541
107	ಬಳ್ಳಾರಿ	ಹೊಸಪೇಟೆ	251	35	286
108	ಬಾಗಲಕೋಟೆ	ಇಳಕಲ್ಲು	63	12	75
109	ಬಾಗಲಕೋಟೆ	ಗುಳೆದಗುಡ್ಡ	56	14	70
110	ಬಾಗಲಕೋಟೆ	ಜಮಖಂಡಿ	447	79	526
111	ಬಾಗಲಕೋಟೆ	ಬಾಗಲಕೋಟೆ	61	42	103
112	ಬಾಗಲಕೋಟೆ	ಬಾದಾಮಿ	313	88	401
113	ಬಾಗಲಕೋಟೆ	ಬಿಳಗಿ	134	47	181
114	ಬಾಗಲಕೋಟೆ	ಮುಧೋಳ	414	105	519
115	ಬಾಗಲಕೋಟೆ	ಹುನಗುಂದ	270	79	349
116	ಬಿಜಾಪುರ	ಇಂಡಿ	382	52	434

117	ಬಿಜಾಪುರ	ಚಡಚಣ	190	25	215
118	ಬಿಜಾಪುರ	ತಾಳಿಕೋಟೆ	130	6	136
119	ಬಿಜಾಪುರ	ನಿಡಗುಂದಿ	226	24	250
120	ಬಿಜಾಪುರ	ಬಬಲೇಶ್ವರ	218	78	296
121	ಬಿಜಾಪುರ	ಬಸವನ ಬಾಗೇವಾಡಿ	479	37	516
122	ಬಿಜಾಪುರ	ಬಿಜಾಪುರ	648	166	814
123	ಬಿಜಾಪುರ	ಮುದ್ದೇಬಿಹಾಳ	251	51	302
124	ಬಿಜಾಪುರ	ಸಿಂಧಗಿ	337	128	465
125	ಬೀದರ್	ಔರಾದ್	1010	31	1041
126	ಬೀದರ್	ಚಿಟಗುಪ್ಪ	148	14	162
127	ಬೀದರ್	ಬಸವಕಲ್ಯಾಣ	1326	66	1392
128	ಬೀದರ್	ಬೀದರ್	1831	64	1895
129	ಬೀದರ್	ಬಾಲ್ಕಿ	1101	63	1164
130	ಬೀದರ್	ಹುಮ್ನಾಬಾದ್	585	68	653
131	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	1230	80	1310
132	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	782	82	864
133	ಬೆಂಗಳೂರು	ನೆಲಮಂಗಲ	726	60	786

	ಗ್ರಾಮಾಂತರ				
134	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	1471	66	1537
135	ಬೆಂಗಳೂರು ಜಿಲ್ಲೆ	ಆನೇಕಲ್	2338	142	2480
136	ಬೆಂಗಳೂರು ಜಿಲ್ಲೆ	ಬೆಂಗಲೂರು ಉತ್ತರ	1062	44	1106
137	ಬೆಂಗಳೂರು ಜಿಲ್ಲೆ	ಬೆಂಗಳುರು ದಕ್ಷಿಣ	1814	119	1933
138	ಬೆಂಗಳೂರು ಜಿಲ್ಲೆ	ಬೆಂಗಳೂರು ಪುರ್ವ	1620	89	1709
139	ಬೆಂಗಳೂರು ಜಿಲ್ಲೆ	ಯಲಹಂಕ	1186	59	1245
140	ಬೆಳಗಾವ	ಅಧಣಿ	1616	130	1746
141	ಬೆಳಗಾವ	ಕಿತ್ತೂರು	100	63	163
142	ಬೆಳಗಾವ	ಖಾನಾಪುರ	379	34	413
143	ಬೆಳಗಾವ	ಗೋಕಕ್	350	16	366
144	ಬೆಳಗಾವ	ಚಿಕ್ಕೋಡಿ	1050	58	1108
145	ಬೆಳಗಾವ	ನಿಪ್ಪಾಣಿ	238	36	274
146	ಬೆಳಗಾವ	ಬೆಳಗಾಂ	889	31	920
147	ಬೆಳಗಾವ	ಬೈಲಹೊಂಗಲ	116	41	157
148	ಬೆಳಗಾವ	ರಾಮದುರ್ಗ	316	31	347
149	ಬೆಳಗಾವ	ರಾಯಬಾಗ್	407	37	444
150	ಬೆಳಗಾವ	ಸವದತ್ತಿ	793	51	844

151	ಬೆಳಗಾವ	ಹುಕ್ಕೇರಿ	731	30	761
152	ಮಂಡ್ಯ	ಕೆ.ಆರ್.ಪೇಟೆ	1507	76	1583
153	ಮಂಡ್ಯ	ನಾಗಮಂಗಲ	1876	25	1901
154	ಮಂಡ್ಯ	ಪಾಂಡವಪುರ	401	10	411
155	ಮಂಡ್ಯ	ಮಂಡ್ಯ	1928	66	1994
156	ಮಂಡ್ಯ	ಮದ್ದೂರು	2466	78	2544
157	ಮಂಡ್ಯ	ಮಳವಳ್ಳಿ	1858	64	1922
158	ಮಂಡ್ಯ	ಶ್ರೀರಂಗಪಟ್ಟಣ	1162	43	1205
159	ಮೈಸೂರು	ಕೆ.ಆರ್.ನಗರ	853	58	911
160	ಮೈಸೂರು	ಟಿ.ನರಸೀಪುರ	532	34	566
161	ಮೈಸೂರು	ನಂಜನಗೂಡು	968	43	1011
162	ಮೈಸೂರು	ಪಿರಿಯಾಪಟ್ಟಣ	755	78	833
163	ಮೈಸೂರು	ಮೈಸೂರು	1238	64	1302
164	ಮೈಸೂರು	ಹುಣಸೂರು	946	48	994
165	ಮೈಸೂರು	ಹೆಗ್ಗಡದೇವನಕೋಟೆ	697	34	731
166	ಯಾದಗಿರ್	ಗುರುಮಿಟ್ಕಲ್	708	17	725
167	ಯಾದಗಿರ್	ಯಾದಗಿರ್	1702	37	1739
168	ಯಾದಗಿರ್	ವಡಗೇರ	657	25	682

169	ಯಾದಗಿರ್	ಶಹಪುರ	1406	47	1453
170	ಯಾದಗಿರ್	ಶೋರಪುರ	1495	37	1532
171	ಯಾದಗಿರ್	ಹುಣಸಿಗಿ	1127	29	1156
172	ರಾಮನಗರ	ಕನಕಪುರ	2320	155	2475
173	ರಾಮನಗರ	ಚನ್ನಪಟ್ಟಣ	423	53	476
174	ರಾಮನಗರ	ಮಾಗಡಿ	1026	76	1102
175	ರಾಮನಗರ	ರಾಮನಗರ	886	125	1011
176	ರಾಯಚೂರು	ದೇವದುರ್ಗ	1517	33	1550
177	ರಾಯಚೂರು	ಮಸ್ಕಿ	462	10	472
178	ರಾಯಚೂರು	ಮಾನ್ವಿ	3646	58	3704
179	ರಾಯಚೂರು	ರಾಯಚೂರು	2871	86	2957
180	ರಾಯಚೂರು	ಲಿಂಗಸೂಗೂರು	1908	21	1929
181	ರಾಯಚೂರು	ಸಿಂಧನೂರು	3756	139	3895
182	ಶಿವಮೊಗ್ಗ	ತೀರ್ಥಹಳ್ಳಿ	149	18	167
183	ಶಿವಮೊಗ್ಗ	ಭದ್ರಾವತಿ	323	31	354

ಶ್ರೀ ಮಂಜುನಾಥ್ ಎಸ್.ಪಿ. (ಹುಣಸೂರು): ಅಧ್ಯಕ್ಷರೆ, ಉತ್ತರ ದೊರೆತಿದೆ ಕಳೆದ 5 ವರ್ಷದಿಂದ ಈ ಉತ್ತರ ಜೆರಾಕ್ಸ್ ತರಹನೇ ಕಾಣಿಸುತ್ತಿದೆ. ಆದ್ದರಿಂದ ದಯಮಾಡಿ, ಈ ಸರ್ಕಾರ ರೈತ ಪರ ಇರುವಂಥ ಸರ್ಕಾರವಾಗಿದೆ. ಆದಷ್ಟು ಆದ್ಯತೆ ಮೇಲೆ ಈ ಮೋಜಣಿಗೆ ಆಸಕ್ತಿ

ಮುಖ್ಯವೆಂದು ಕಾಣಿಸುತ್ತಿದೆ, ಸನ್ಮಾನ್ಯ ಸಚಿವರು ಇದರ ಬಗ್ಗೆ ಅತ್ಯಂತ ಜರೂರಾದ, ಜವಾಬ್ದಾರಿಯುತವಾದಂಥ immediate action ತೆಗೆದು ಕೊಳ್ಳಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು : ಮಂತ್ರಿಗಳೆ, ತಾವು ತೀವ್ರ ಕ್ರಮ ಕೈಗೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು); ಅಧ್ಯಕ್ಷರೆ, ಈಗ ಬಹಳ ಪ್ರಮುಖವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಈ ಪ್ರಕರಣಗಳಿಗೆ ಸಂಬಂಧ ಪಟ್ಟಂತೆ, ಮೋಜಣಿ ಮತ್ತು ಬಾಕಿ ಇರುವಂಥ ಪ್ರಕರಣಗಳ ಸಂಖ್ಯೆ ಹಾಗೂ ಪೊಡಿ ಆಂದೋಲನ ಯಾವ ಹಂತದಲ್ಲಿದೆ ಎಂದು ಕೇಳಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳು ಮೊದಲು ನಮೂನೆ 1ರಿಂದ 5 ವರೆಗೆ ನಮೂನೆ ಭರ್ತಿ ಮಾಡಬೇಕಾದಂಥ ಕಾರ್ಯ ಪಗತಿಯಲ್ಲಿದೆ. ಶೇಕಡ 50 ರಷ್ಟಾಗಿದೆ. Land grant ನಿಂದ ಹಿಡಿದು abstract ತೆಗೆದು ಕೊಳ್ಳುವವರಿಗೆ ಎಷ್ಟು ಸಮಸ್ಯೆ ಇದೆಯೆಂದು ತಮಗೆ ಗೊತ್ತಿದೆ.

ಅಧ್ಯಕ್ಷರು :ಯಾವ ಜಿಲ್ಲೆಗೆ ಆಗಿದೆ? ಸರ್ವೆಯರ್ ಕೊರತೆಯಿದೆಯೇ? ಅವರನ್ನು ನೇಮಕ ಮಾಡುವುದಕ್ಕೆ ಬರುವುದಿಲ್ಲವೆ?

ಶ್ರೀ ವಿ .ಶ್ರೀನಿವಾಸ ಪ್ರಸಾದ್ : ಅಧ್ಯಕ್ಷರೆ, ಸರ್ವೆಯರ್ ಕೊರತೆಯಿಂದ ಈ ಸಮಸ್ಯೆ ಆಗಿದೆ ಮೊದಲು ಇಲಾಖೆಯಲ್ಲಿ ಭೂಮಾಪಕರ ಕೊರತೆ ಇತ್ತು. ಫಾರಂ 1 ಮತ್ತು 5 ರ ಕೊರತೆ ಇತ್ತು ಬಹುತೇಕ RTCಯಲ್ಲಿ defects ಇತ್ತು. ಎನ್ನುವ ಕಾರಣಕ್ಕೆ ಇದನ್ನು ಮಾಡಲಾಗಿತ್ತು . ನಮ್ಮ ಸರ್ಕಾರ ಬಂದ ಮೇಲೆ ಮೊದಲು ಇದರ ಬಗ್ಗೆ ವಿಶೇಷವಾದಂಥ ಗಮನ ಕೊಟ್ಟಿತು . ಸರ್ವೆಯರ್‌ಗಳ ನೇಮಕಾತಿಯಾಗಿ 3 ತಿಂಗಳು ಆಗಿದೆ. ಅವರಿಗೆ ತರಬೇತಿ ಕೊಡುತ್ತಿದ್ದೇವೆ. 1,869 ಜನ ಸರ್ವೆಯರ್‌ಗಳು ಸಿಕ್ಕಿದ್ದಾರೆ. ಮೊದಲು ಸರ್ವೆಯರ್‌ಗಳು ಬೇಕಾಗುತ್ತಾರೆ. 3 ತಿಂಗಳಿನಲ್ಲಿ ಹುದ್ದೆಗಳು ಪೂರ್ಣ ವಾಗುತ್ತದೆ. ಎಲ್ಲರೂ ಸಿಗುತ್ತಾರೆ. ಜೊತೆಗೆ licenced ಸರ್ವೆಯರ್ಸ್‌ದ್ದು ಸ್ವಲ್ಪ ಅಸಡ್ಡೆ ಇರುವುದು ತಮಗೂ ಗೊತ್ತಿದೆ. ಹಿಂದೆ ಅವರಿಗೆ ₹ 300/– ಗಳನ್ನು

ಕೊಡಲಾಗುತ್ತಿತ್ತು. ಈಗ ನಮ್ಮ ಸರ್ಕಾರ ಬಂದ ಮೇಲೆ ಈ ವಿಷಯವಾಗಿ ಸಾಕಷ್ಟು ಚರ್ಚೆಯಾಗಿ ಅವರಿಗೆ ₹ 800/ – ಗಳು ಅಲ್ಲದೆ ಇನ್ನೂ ಹೆಚ್ಚು ಮಾಡಲಾಗುತ್ತಿದೆ. Licenced ಸರ್ವೆಯರ್‌ಗಳನ್ನು ಕೂಡ ಬಳಸಿಕೊಳ್ಳಬಹುದು. ಈ ತರಬೇತಿ ಮುಗಿದ ಮೇಲೆ ಇನ್ನೂ 700 ಜನರಿಗೆ sanction ಆಗಿದೆ. ಮೊದಲು ಸಾಕಷ್ಟು ಸರ್ವೆಯರ್‌ಗಳನ್ನು ತೆಗೆದು ಕೊಳ್ಳುತ್ತೇವೆ. ಇನ್ನೂ 3 ತಿಂಗಳು ಬಿಟ್ಟು ನಮಗೆ ಸಾಕಷ್ಟು ಸರ್ವೆಯರ್‌ಗಳು ಸಿಗುತ್ತಾರೆ. ಎಲ್ಲ ಕಡೆಯೂ ಕೂಡ ಅದನ್ನು ಮಾಡುತ್ತೇವೆ. ನಮೂನೆ 1ರಿಂದ 5 ವರೆಗೂ ಕೂಡ ಸಾಕಷ್ಟು ಪ್ರಗತಿಯಾಗಿದೆ. 1ರಿಂದ 2 ತಿಂಗಳ ಒಳಗೆ ಅದನ್ನು ನಮೂನೆ 1ರಿಂದ 5 ಇರತಕ್ಕಂಥದ್ದನ್ನು ಮಾಡುತ್ತೇವೆ. ಈ RTC ಯಲ್ಲಿ ತಿದ್ದುಪಡಿಗಳು ಏನು ಇವೆ ಅದನ್ನು 3 ತಿಂಗಳಿನಲ್ಲಿ ಸರಿಪಡಿಸುತ್ತೇವೆ. ಎಲ್ಲರೂ ಈಗಾಗಲೇ ಚರ್ಚೆ ಮಾಡಿದ್ದೇವೆ ಹಾಗೂ ಎಲ್ಲ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇವೆ. ಅದನ್ನು ಸರಿಪಡಿಸುತ್ತೇವೆ. ಈ ಮೂರು ಆದ ತಕ್ಷಣ ಇವತ್ತು ಯಾವುದು ಪೆಂಡಿಂಗ್ ಇದೆ, ಅದರ ಜೊತೆಗೆ, ತಮಗೆ re-survey programme ಬಗ್ಗೆ ತಮಗೆ ಗೊತ್ತಿದೆ. ರಾಷ್ಟ್ರಮಟ್ಟದಲ್ಲಿ ಅದು ಒಂದು ಒಳ್ಳೆಯ ಪ್ರೋಗ್ರಾಮ್ ಆಗಿ ತೆಗೆದುಕೊಂಡಿದ್ದೇವೆ ಅಂದರೆ, ರಾಷ್ಟ್ರೀಯ ಭೂ ದಾಖಲೆಗಳ ಆಧುನೀಕರಣ ಯೋಜನೆಯನ್ನು re-Survey ಮಾಡ ತಕ್ಕಂಥದ್ದಾಗಿದೆ. ನಮ್ಮ ರಾಜ್ಯಕ್ಕೆ 600 ಕೋಟಿ ರೂಪಾಯಿಗಳು ಬೇಕಾಗುತ್ತದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈಗಾಗಲೇ 90 ಕೋಟಿ ರೂಪಾಯಿಗಳನ್ನು release ಮಾಡಿದ್ದಾರೆ. ನಾವು ಈಗಾಗಲೇ ಬೆಳಗಾಂ ಜಿಲ್ಲೆಯಲ್ಲಿ ಕೆಲವೊಂದು ಗ್ರಾಮಗಳನ್ನು ತೆಗೆದುಕೊಂಡಿದ್ದೇವೆ. ಐದು ಜಿಲ್ಲೆಗಳಲ್ಲಿ re-Survey ಕಾರ್ಯಕ್ರಮ ಆಗಬೇಕೆಂದು ಪ್ರಾರಂಭ ಮಾಡಿದ್ದೇವೆ. ಇನ್ನೂ ಸ್ವಲ್ಪ ದಿನಗಳು ಬಿಟ್ಟು ಇನ್ನು ಉಳಿದ 25 ಜಿಲ್ಲೆಗಳಲ್ಲೂ ಕೂಡ re-Survey ಕಾರ್ಯಕ್ಕೆ ಈಗ action plan ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ approval ಗೆ ಕೂಡ ಕಳುಹಿಸಿದ್ದೇವೆ. ಆದಷ್ಟು ಬೇಗ ಅಂದರೆ ಇನ್ನೂ 3 ರಿಂದ 6ತಿಂಗಳ ಒಳಗೆ ಇವೆಲ್ಲ ಮುಗಿದ ಮೇಲೆ ನಮೂನೆ 1ಮತ್ತು5 ಸರ್ವೆಯರ್‌ಗಳ appointment RTC ಯಲ್ಲಿರುವ defectಗಳು ಇಷ್ಟು ಸರಿಮಾಡಿಕೊಂಡು,

ಎಷ್ಟು ಪೋಡಿಗಳು..... ಇವತ್ತಿನ ದಿವಸ ತಮಗೆ ಆಶ್ಚರ್ಯವಾಗುತ್ತದೆ. ನನಗೆ ದಿಗ್ಭ್ರಮೆಯಾಗುತ್ತದೆ. 2,98,861 ಪೋಡಿಗಳು ಇವೆ. ಇನ್ನು 3 ರಿಂದ 6 ತಿಂಗಳೊಳಗಡೆ ನಮೂನೆ 1 ಮತ್ತು 5 ,Surveyors ' appointment, RTC ಯಲ್ಲಿ ಆಗದಿರುವಂಥಹ defects ಇವೆಲ್ಲವನ್ನೂ ಸರಿ ಮಾಡಿಕೊಂಡು, ಸುಮಾರು ಮೋಡಿ ಗಳು ಬಾಕಿಯಿದ್ದು, ಎಷ್ಟಿವೆ ಎಂದರೆ ತಮಗೂ ಆಶ್ಚರ್ಯವಾಗುತ್ತದೆ, ನನಗೂ ದಿಗ್ಭ್ರಮೆಯಾಗುತ್ತದೆ. ದರಖಾಸ್ತು, alienation, ಹದ್ದುಬಸ್ತು, ಮ್ಯುಟೇಷನ್ ಇತ್ಯಾದಿ ಎಲ್ಲವೂ ಸೇರಿದರೆ ಸುಮಾರು 2,98,861 ಪೋಡಿಗಳನ್ನು ಮಾಡಬೇಕಾಗಿದೆ. ಇದಕ್ಕೆ ನಾವು ಸಿದ್ಧರಾಗುತ್ತಿದ್ದೇವೆ ,War-footing ನಲ್ಲಿ ಈ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ ಹಾಗೂ ಖಂಡಿತವಾಗಿ ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಬೋಪಯ್ಯನವರೇ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಮೋಜಣಿ ಮತ್ತು ಪೋಡಿ ಆಂದೋಲನ ಎನ್ನುವ ಎರಡು ಕಾರ್ಯಕ್ರಮಗಳಲ್ಲಿ ಮೊದಲು ಒಂದು ಹೋಬಳಿಯಲ್ಲಿ ಪೊಡಿ ಆಂದೋಲನ ಎಂದು ಹಿಂದಿನ ಸರ್ಕಾರ ಇದ್ದಾಗ ಪ್ರಾರಂಭ ಮಾಡಿದರು. ಆದರೆ ಈ ಕಾರ್ಯ ಆಂದೋಲನವಾಗಿಯೇ ಉಳಿದಿದೆಯೇ ಹೊರತು ಇಂದು ಕಂದಾಯ ಇಲಾಖೆಯ ಯಾವುದೇ ಕಛೇರಿಗೆ ಹೋಗಿ ನೋಡಿದರೂ ಸಹ ಒಂದೇ ಒಂದು ಕೆಲಸವೂ ಸಹ ಆಗಿಲ್ಲ. At least, ಸರ್ವೇಯರ್ ಕೊರತೆ ಒಂದು ಕಡೆಯಾದರೆ, full ಸರ್ವೆ ನಂಬರ್ ಇರುವುದನ್ನು ಮಾಡಿ ಮುಗಿಸುವುದಕ್ಕೆ ಏನು ತೊಂದರೆಯಿದೆ?

ಕಡತಗಳೆಲ್ಲವನ್ನು ಕಟ್ಟಿಟ್ಟಿದ್ದು, ಧೂಳು ಹಿಡಿಯುತ್ತಿದೆ.ನೀವು ನೀಡಿರುವ ಮಾಹಿತಿಯಲ್ಲಿ ನಮ್ಮ ಜಿಲ್ಲೆಯದು ಎಷ್ಟು ಪೆಂಡಿಂಗ್ ಇದೆ ನೋಡಿ.

ಅಧ್ಯಕ್ಷರು : ಈಗ ಅದಕ್ಕೆ ಏನು ಮಾಡಬೇಕೆಂದು ಹೇಳಿ,

ಶ್ರೀ ಕೆ.ಜಿ.ಬೋಪಯ್ಯ : ಅದಕ್ಕಾಗಿ At least , full ಸರ್ವೆ ನಂಬರ್ ಇರುವಂಥದ್ದು ಹಾಗೂ RTC problem ಇಲ್ಲದೇ ಇರುವಂಥ ಪ್ರಕರಣಗಳನ್ನಾದರೂ clear ಮಾಡಬಹುದಲ್ಲವೇ? ಸರ್ಕಾರದಿಂದ ಇದನ್ನು

ಸ್ಥಗಿತ ಮಾಡಿ ಎಂದು ಆದೇಶ ನೀಡಿದೆಯೆಂದು ಹೇಳಿ ಕಟ್ಟೆ ಇಟ್ಟು ಬಿಟ್ಟಿದ್ದಾರೆ ಇದು ಸರಿಯಲ್ಲ. ಮತ್ತೊಂದು ವಿಚಾರ, ಅಧಿಕಾರಿಗಳ ಕೊರತೆ, ಮುಖ್ಯವಾಗಿ ತಹಸೀಲ್ದಾರರು, ನಮ್ಮ ತಾಲ್ಲೂಕಿಗೆ 3 ತಿಂಗಳಿಗೆ ನಿವೃತ್ತರಾಗುವಂಥ ತಹಸೀಲ್ದಾರರನ್ನು ನೇಮಿಸುತ್ತೀರಿ, ಈ ರೀತಿ ಏಕೆ ಎಂದು ಗೊತ್ತಿಲ್ಲ. ಈಗ ಒಬ್ಬರು ತಹಸೀಲ್ದಾರರನ್ನು. ನೇಮಿಸಿದ್ದೀರಿ.

ಅಧ್ಯಕ್ಷರು :ಈಗ ತಹಸೀಲ್ದಾರರ ವಿಚಾರ ಬೇಡ.

ಶ್ರೀ ಕೆ.ಜಿ.ಬೋಪಯ್ಯ : ಈ ರೀತಿಯಾದರೆ ಕಂದಾಯ ಇಲಾಖೆಯ ಸರ್ವೆ ಮತ್ತು ಪೋಡಿ ಇತ್ಯಾದಿ ಕೆಲಸಗಳು ಯಾವಾಗ ಮುಗಿಯುತ್ತದೆ? ಇದರಿಂದಾಗಿ, ಸರಿಯಾದ ದಾಖಲಾತಿಗಳಿಲ್ಲದೆ ಇಂದು ರೈತರಿಗೆ ಯಾವುದೇ ಬಡ್ಡಿ ರಹಿತ ಸಾಲವನ್ನು ಪಡೆಯುವುದಕ್ಕೆ ಆಗುತ್ತಿಲ್ಲ. ಈ ತೊಂದರೆಯನ್ನು ಯಾವಾಗ ನಿವಾರಿಸುತ್ತೀರಿ? At least , ಒಂದು ಸೂಚನೆಯನ್ನು ಕೊಡಿ, ಪೋಡಿ ಆಂದೋಲನ, ಮೋಜಣಿ ಎಂದು ಮೋಜು ಮಾಡುವುದು ಬೇಡ, ರೈತರಿಗೆ ಸಾಲ ಪಡೆಯುವುದಕ್ಕೆ ಏನು ಬೇಕೋ ಅದನ್ನು ಕೊಡುವ ಸೂಚನೆಯನ್ನಾದರೂ ಕೊಡಿ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ : ನಾವು ಬಹಳ ವಿಶೇಷವಾದ ಆಸಕ್ತಿಯನ್ನು ವಹಿಸಿ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಬೋಪಯ್ಯನವರೆ, ಖಂಡಿತವಾಗಿ ಮಾಡುತ್ತೇವೆ. ಏಕೆಂದರೆ, ನಿಮ್ಮ ಸರ್ಕಾರವಿದ್ದಾಗ ... ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ನಾನು blame ಮಾಡುತ್ತಿಲ್ಲ. ಅನೇಕಾರು ಸಮಸ್ಯೆಗಳು ಹಾಗೇ ಮುಂದುವರೆದಿದೆ. ಆ ಸಮಸ್ಯೆಗಳಿಗೆ ಗಮನ ಕೊಟ್ಟು ಯಾವ ರೀತಿ ಪರಿಹಾರ ಮಾಡಬೇಕೆಂದು ಸಹ ಚಿಂತನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಂತ್ರಿಗಳು ಮಾತನಾಡುತ್ತಿದ್ದಾರೆ, ಬೋಪಯ್ಯನವರೆ ನೀವು ಮಾತನಾಡುತ್ತಿದ್ದೀರಲ್ಲ?

ಕೆ.ಜಿ. ಬೋಪಯ್ಯ : ಸರ್ಕಾರ ಎಂದರೆ 8 ತಿಂಗಳಿನಿಂದ ಏನು ಮಾಡಿದ್ದೀರಿ?

ಶ್ರೀ ವಿ,ಶ್ರೀನಿವಾಸ್ ಪ್ರಸಾದ್ : ಎಲ್ಲವನ್ನು clear ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ತಮ್ಮಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಪಕ್ಕಾ ಪೋಡಿ ಮಾಡುವ ವಿಚಾರದಲ್ಲಿ 1:5 ಎಂದು ಇದೆ, ಆ ಪ್ರಕಾರ ನೀವು ಒಂದು system ತರುವುದಕ್ಕೆ ಹೊರಟಿದ್ದೀರಿ. ಅದು ಅಷ್ಟು ಸುಲಭವಾಗಿ ಆಗುವುದಿಲ್ಲ. ಅದನ್ನು ಬಿಟ್ಬುಬಿಡಿ , ಯಾರೋ ನನ್ನಂಥ ಒಬ್ಬ ಮನುಷ್ಯ ಪಕ್ಕಾ ಪೋಡಿ ಮಾಡಿಸಿ ಕೊಳ್ಳಬೇಕೆಂದು ಹೇಳಿದರೆ ಆಗುವುದಿಲ್ಲ. ಅದಕ್ಕಾಗಿ ಕರುಣಾಕರರೆಡ್ಡಿಯವರು ಕಂದಾಯ ಮಂತ್ರಿಗಳಾಗಿದ್ದಾಗ ಜಿಲ್ಲಾಧಿಕಾರಿಗಳಿಗೆ ಒಂದು ಮನವಿಯನ್ನು ಕೊಟ್ಟ ನಂತರ ಜಿಲ್ಲಾಧಿಕಾರಿಗಳ permission ತೆಗೆದುಕೊಂಡು ಮಾಡಬಹುದೆಂದು ಮಂತ್ರಿಗಳು direction ನೀಡಿದರು. ಆದರೆ, ಜಿಲ್ಲಾಧಿಕಾರಿಗಳಿಂದ ಎ.ಸಿ.ಯವರಿಗೆ ಕಡತ ಬಂದು ಪುನ: ಎ.ಸಿ. ಯವರಿಂದ ಜಿಲ್ಲಾಧಿಕಾರಿಗಳಿಗೆ ಕಡತ ವಾಪಸ್ಸು ಹೋಗಬೇಕಾದರೆ ಆ ಮನುಷ್ಯ ಸತ್ತು ಹೋಗಿರುತ್ತಾನೆ. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಮೊದಲು ಇದ್ದ ರೀತಿಯಲ್ಲೇ ಏಕೆಂದರೆ ಕೆಲವರು ಅರ್ಜೆಂಟನಲ್ಲಿರುತ್ತಾರೆ, ಪಕ್ಕಾ ಪೋಡಿ ಮಾಡಿಸಿಕೊಂಡು ಹಿಸ್ಸೆ ಮಾಡುವವರು, ಮಾರಾಟ ಮಾಡುವವರು ಇರುತ್ತಾರೆ. ಆದ್ದರಿಂದ, individual cases ನಲ್ಲಿ ತಹಸೀಲ್ದಾರರಿಗೆ ಹಿಂದೆ ಏನು power ನೀಡಿದ್ದರೋ ಅದೇ ರೀತಿ ಈಗಲೂ ತಹಸೀಲ್ದಾರರಿಗೆ permission ಕೊಟ್ಟು ಪಕ್ಕಾ ಮೋಡಿ ಮಾಡುವುದಕ್ಕೆ ಹೇಳಿದರೆ ಆಗುತ್ತದೆ.

ಶ್ರೀ ಕೆ.ಜಿ.ಬೋಪಯ್ಯ : ಈ ರೀತಿ instructions ಕೊಡಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ತಾವು ಬಹಳ ಒಳ್ಳೆಯ ಸಲಹೆಯನ್ನು ನೀಡಿದ್ದೀರಿ. ಈ ಸಲಹೆಯನ್ನು ನಾನು ಸ್ವೀಕಾರ ಮಾಡಿ ಪರಿಗಣಿಸುತ್ತೇನೆ. ಖಂಡಿತವಾಗಿ ಇದನ್ನು ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ಪರಿಗಣಿಸಿ,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಸ್ಪಷ್ಟವಾಗಿ ತಾವು ನೀಡಿದಂಥ ಸಲಹೆಯನ್ನು ಪರಿಗಣಿಸಿ ಆದೇಶಿಸುತ್ತೇವೆ ಎಂದು ಹೇಳಲಿ, ತಾವು ನೀಡಿದ ಒಳ್ಳೆಯ ಸಲಹೆ ಬಗ್ಗೆ ಚರ್ಚಿಸುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ.

ಅಧ್ಯಕ್ಷರು : ಮಂತ್ರಿಗಳ ಭಾಷೆಯಲ್ಲಿ ವಿಚಾರ positive ಆಗಿಯೇ ಇದೆ. ಅದರಂತೆ ಮಾಡುತ್ತಾರೆ ಎನ್ನುವ ನಂಬಿಕೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದು ವಿನಂತಿ ಏನೆಂದರೆ, ಇಡೀ ರಾಜ್ಯದಲ್ಲಿ ಸರ್ವೇ ಬಹಳಷ್ಟು ಸಮಸ್ಯೆಯಾಗಿದೆ. ಇವತ್ತು ಸರ್ವೇಯರ್‌ಗಳಿಲ್ಲದೆ ದೊಡ್ಡ ದೊಡ್ಡ ಕೇಸ್‌ಗಳು ಬಹಳಷ್ಟು ಸಂಖ್ಯೆಯಲ್ಲಿದ್ದು ನಿಕಾತಿ ಯಾಗುತ್ತಿಲ್ಲ. ಇದರಿಂದಾಗಿ ದ್ವೇಷಗಳು, ವೈಮನಸ್ಸುಗಳು ಹೆಚ್ಚುತ್ತಿವೆ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಮಾನ್ಯ ಸಚಿವರ ಬಗ್ಗೆ ನನಗೆ ಗೌರವವಿದೆ. ನೀವು ವಿಷಯವನ್ನು positive ಆಗಿ ನೋಡುತ್ತಿರೆನ್ನುವ ವಿಶ್ವಾಸವಿದೆ.

ಅಧ್ಯಕ್ಷರು : ನೀವು ವಿಷಯದ ಬಗ್ಗೆ ಮಾತನಾಡಿ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸಭಾಧ್ಯಕ್ಷರೆ ಒಳ್ಳೆಯ ಸಲಹೆಯನ್ನು ನೀಡಿದ್ದಾರೆ ಇನ್ನೊಂದು ವಾರದೊಳಗಾಗಿ ತಹಸೀಲ್ದಾರರಿಗೆ ಅನುಮತಿ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರೆ ನಮಗೆ ವಿಶ್ವಾಸ ಬರುತ್ತದೆ.

ಶ್ರೀ ಹೆಚ್.ಪಿ.ಮಂಜುನಾಥ್ : ಮಾನ್ಯ ಸಭಾಧ್ಯಕ್ಷರು ನೀಡಿರುವ ಸಲಹೆ ಪ್ರಕಾರ ಈ ಸರ್ಕಾರ ಪರಿಗಣಿಸಿದರೆ, ಈ ರಾಜ್ಯದ ರೈತರು ಸರ್ಕಾರದ ಬಗ್ಗೆ ಒಳ್ಳೆಯ ನಿರೀಕ್ಷೆಯನ್ನು ಇಟ್ಟುಕೊಂಡಿದ್ದು ಬಹಳ ಸಂತೋಷ ಪಡುತ್ತಾರೆ . ಮಾನ್ಯ ಸಭಾಧ್ಯಕ್ಷರು ನೀಡಿರುವ ಸಲಹೆಯನ್ನು ದಯಮಾಡಿ ಮಾನ್ಯ ಕಂದಾಯ ಸಚಿವರು ಪರಿಗಣಿಸಿ ಕಾನೂನನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ಸಲಹೆಯಂತೆ ಕೆಲಸವನ್ನು ಮಾಡಿಕೊಡಿ ಸಚಿವರೆ, ನಿಮಗೆ ಕೈಮುಗಿಯುತ್ತೇವೆ.

ಶ್ರೀ ಎನ್.ಹೆಚ್.ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಚಿವರಿಂದಲೇ ಕಮಿಟ್ ಮಾಡಿಸಿಬಿಡಿ , ಇಲ್ಲವೆಂದರೆ effect ಆಗುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಿಯಮ 60ರಡಿ ನಮ್ಮ ವಿಚಾರದ ಚರ್ಚೆಯಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಮ್ಮದೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ಇನ್ನೂ ಪ್ರಶ್ನೋತ್ತರ ಅವಧಿ ಮುಕ್ತಾಯವಾಗಿಲ್ಲ. ಇನ್ನು ಒಂದು ಪ್ರಶ್ನೆ ಉಳಿದಿದೆ. ಶ್ರೀ ಅಪ್ಪಾಜಿ ನಾಡಗೌಡ.

ಕ್ರೀಡಾಂಗಣವನ್ನು ಸ್ಥಾಪಿಸುವುದು

30(240); ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ

(ಮುದ್ದೇಬಿಹಾಳ)

ಅ) ಕಳೆದ ಮೂರು ವರ್ಷಗಳಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಒದಗಿಸಿದ ಮತ್ತು ಬಿಡುಗಡೆಯಾದ ಅನುದಾನವೆಷ್ಟು; ಕ್ರೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನವೆಷ್ಟು (ಸಂಪೂರ್ಣ ವಿವರ ನೀಡುವುದು)

ಆ) ರಾಜ್ಯದಲ್ಲಿರುವ ಕ್ರೀಡಾಂಗಣಗಳೆಷ್ಟು ; ಉತ್ತರ ಕರ್ನಾಟಕದಲ್ಲಿರುವ ಕರ್ನಾಟಕಕ್ಕೆ ಹೊಸದಾಗಿ ಕ್ರೀಡಾಂಗಣಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)